ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸ್ಪೆಷಲ್ ಕೇಸ್ ನಂಬರ್ : 92/2011**

**ಫ್ರಾಸಾ- 67 ಚಾಸಾ- 92**

ಸಾಕ್ಷಿದಾರರ ಹೆಸರುಃ : ಜಿ ಎಂ ಸುರೇಶ್

ತಂದೆಯ ಹೆಸರುಃ : ಮುದ್ದವೀರೇಗೌಡ

ವಯಸ್ಸುಃ : 52 ವರ್ಷ

ಉದ್ಯೋಗಃ : ಸೀನಿಯರ್ ಮೋಟಾರ್ ವೆಹಿಕಲ್ ಇನ್ಸೆಕ್ಟರ್

ವಾಸ : ಕೊಪ್ಪಳ

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 12-08-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು 2010 ರಿಂದ 2012ರವರೆಗೆ ಹಾಸನದ ಆರ್.ಟಿ.ಒ. ಕಛೇರಿಯಲ್ಲಿ ಮೋಟಾರು ವಾಹನ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕ 21-8-2010ರಂದು ಕರ್ನಾಟಕ ಲೋಕಾಯುಕ್ತ ಚಿಕ್ಕಮಗಳೂರು ಇದರ ಪೊಲೀಸರು ಉಪಾಧೀಕ್ಷಕರು ಕೆಎ-13-ಎಸ್-8489ರ ವಾಹನದ ನಿರ್ವಹಣಾ ವೆಚ್ಚದ ವಿವರವನ್ನು ನೀಡುವಂತೆ ಕೋರಿಕೊಂಡಿದ್ದರು. ಅದರಂತೆ ನಾನು ಸದರಿ ವಾಹನದ ಇಂಧನ ಮತ್ತು ಇತರ ಖರ್ಚುವೆಚ್ಚಗಳ ಅಂದಾಜು ಮೌಲ್ಯವನ್ನು ದಿನಾಂಕ 2-9-2010ರಂದು ನೀಡಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ನಿಪಿ-124ಎಂದು ಸಾಕ್ಷಿಯ ರುಜುವನ್ನು ನಿಪಿ-124(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ಶ್ರೀ ಬಿ ಜೆ ಪಿ ಎಸ್ ವಕೀಲರಿಂದಃ**

ಲೋಕಾಯುಕ್ತ ಪೊಲೀಸರು ಆ ವಾಹನದ ದಾಖಲೆಗಳನ್ನು ನನಗೆ ಕಳುಹಿಸಿಕೊಟ್ಟಿರಲಿಲ್ಲ. ನಾನು ಸದರಿ ವಾಹನವನ್ನು ಸ್ವತಃ ಪರಿಶೀಲನೆ ಮಾಡಿಲ್ಲ. ಆ ವಾಹನ ಆರೋಪಿ ರಂಗಸ್ವಾಮಿಗೆ ಸೇರಿದ್ದಲ್ಲ

ಎನ್ನುವ ವಿಚಾರ ನನಗೆ ತಿಳಿದಿತ್ತು ಎಂದರೆ ಸರಿಯಲ್ಲ. ಈ ವಾಹನಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಯನ್ನು ನನಗೆ ಲೋಕಾಯುಕ್ತ ಪೊಲೀಸರು ನೀಡಿಲ್ಲ. ನಾನು ಆ ವಾಹನ ಅಂದಾಜು ದಿನಕ್ಕೆ 20ಕಿಮೀ ಓಡಿರಬಹುದು ಎದು ಊಹಿಸಿ ವರದಿ ನೀಡಿರುತ್ತೇನೆ. ಲೋಕಾಯುಕ್ತ ಪೊಲೀಸರು ಕಳುಹಿಸಿದ ಪತ್ರದ ಆಧಾರದಲ್ಲಿ ನಾನು ಆ ವರದಿ ನೀಡಿರುತ್ತೇನೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**